# ಶ್ರೀಪದ್ಮನಾಭತೀರ್ಥರು (ಕಾಲ ಸು.1318-1324)

**ಶ್ರೀಮಧ್ವಸಂಸೇವನಲಬ್ಧಶುದ್ಧವಿದ್ಯಾಸುಧಾಂಭೋನಿಧಯೇಽಮಲಾ ಯೇ ।**
**ಕೃಪಾಲವಃ ಪಂಕಜನಾಭತೀರ್ಥಾಃ ಕೃಪಾಲವಸ್ಯಾನ್ಮಯಿ ನಿತ್ಯಮೇಷಾಮ್ ॥**
**ಪೂರ್ಣಪ್ರಜ್ಞಕೃತಂ ಭಾಷ್ಯಂ ಆದೌ ತದ್ಭಾವಪೂರ್ವಕಮ್ ।**
**ಯೋ ವ್ಯಾಕರೋತ್ ನಮಸ್ತಸ್ಮೈ ಪದ್ಮನಾಭಾಖ್ಯ ಯೋಗಿನೇ ॥**

ದ್ವೈತಮತಪ್ರತಿಷ್ಠಾಪನಾಚಾರ್ಯರಾದ ಶ್ರೀಮದಾನಂದತೀರ್ಥರ ಪ್ರಥಮ-(ಘಟ್ಟದ ಮೇಲಿನ)ಶಿಷ್ಯರೇ ಶ್ರೀಪದ್ಮನಾಭತೀರ್ಥರು. ಪೂರ್ವಾಶ್ರಮದಲ್ಲಿ ಶೋಭನ-ಭಟ್ಟರೆಂದು ಖ್ಯಾತನಾಮರಾದ ಇವರು, ಭಾಗವತ ಸಂಪ್ರದಾಯಸ್ಥ, ಆಚಾರವಂತ ವಿಚಾರವಂತ ಕುಟುಂಬದಲ್ಲಿ ಜನಿಸಿದವರು. ಅವರು ತಮ್ಮ ತಂದೆಯಲ್ಲಿ ಅಭ್ಯಾಸಮಾಡಿ ನ್ಯಾಯ-ವೇದಾಂತ-ತರ್ಕ-ಮೀಮಾಂಸ-ಜ್ಯೋತಿಷ್ಯ-ವ್ಯಾಕರಣ ಮತ್ತು ಅಲಂಕಾರಾದಿ ಶಾಸ್ತ್ರಗಳನ್ನು ಬಲ್ಲ ವಿದ್ವನ್ಮಣಿಗಳಾಗಿದ್ದರು.

ಶ್ರೀಶೋಭನಭಟ್ಟರು ಶಾಸ್ತ್ರವಲ್ಲದೇ ಶಸ್ತ್ರವಿದ್ಯೆಯನ್ನೂ ಅರಿತವರಾಗಿದ್ದು, ರಾಜಮಹೇಂದ್ರಿಯ ಕಾಕತೀಯರಾಜ್ಯದ ರಾಜನಾದ ಗಣಪತಿದೇವನ ಆಸ್ಥಾನದಲ್ಲಿ ಮಹಾಮಂತ್ರಿಗಳಾಗಿದ್ದರು.

''**ಯಸ್ತ್ರಯೀ ಸಕಲ ಪಕ್ಷಶಿಕ್ಷಕಸತ್ತ್ರ ಸಂಸದಿ ವರಿಷ್ಠ ಸಮ್ಮತಃ ಶೋಭನೋಪ ಪದಭಟ್ಟನಾಮಕಃ**'' ಎಂಬುದಾಗಿ ಶ್ರೀಸುಮಧ್ವವಿಜಯದಲ್ಲಿ ''ವೇದಕ್ಕೆ ಸಂಬಂಧಿಸಿದ ಸಕಲ ವಿಚಾರಗಳನ್ನು ನಿರ್ಣಯಿಸಿ ಇತರರಿಗೆ ತಿಳಿಸುವರಲ್ಲಿ ಸಮರ್ಥರು ಶೋಭನಭಟ್ಟರು ಎಂದು ವರ್ಣಿಸಲಾಗಿದೆ.

ರಾಜಮಹೇಂದ್ರಿಯ ಗೋದಾವರಿ ತೀರದಲ್ಲಿ ನಡೆದ ಕುಂಭಮೇಳದ ಸಂದರ್ಭ-ವೊಂದರಲ್ಲಿ ಶ್ರೀಶೋಭನಭಟ್ಟರ ಅಪೇಕ್ಷೆಯಮೇರೆಗೆ ನಡೆದ ವಿದ್ವತ್ಸಭೆಯೊಂದರಲ್ಲಿ ಪಾಲ್ಗೊಂಡಿದ್ದ ಅವರಿಗೆ ಸಮೀಪದಲ್ಲೇ ದಕ್ಷಿಣಕರಾವಳಿ ತೀರದ ವೈಷ್ಣವಯತಿಗಳೊಬ್ಬರು ಬದರೀಯಾತ್ರೆ ಮುಗಿಸಿ ಬೀಡುಬಿಟ್ಟಿರುವ ಸಮಾಚಾರ ತಿಳಿಯಿತು. ರಾಜನಿಗೆ ಈ ವಿಷಯ ತಿಳಿಸಿ ಸೂಕ್ತಮರ್ಯಾದೆಗಳೊಂದಿಗೆ ಬರಮಾಡಿಕೊಳ್ಳುವಂತೆ ಪ್ರಾರ್ಥಿಸಲು, ರಾಜನು ಸಂತೋಷಗೊಂಡವನಾಗಿ ಆ ಯತಿವರರನ್ನು ಸ್ವಾಗತಿಸಲು ಬೀಡುಬಿಟ್ಟಿದ್ದ ಶ್ರೀಮದಾನಂದ

-ತೀರ್ಥಭಗವತ್ಪಾದಾಚಾರ್ಯರ ಬಳಿಗೆ ಬಂದನು. ಶ್ರೀಮದಾಚಾರ್ಯರ ದಿವ್ಯ ತೇಜಸ್ಸಿಗೆ ಪ್ರಭಾವಿತನಾದ ಅವನು ಶ್ರೀಮದಾಚಾರ್ಯರನ್ನು ನಮ್ಮ ಅರಮನೆಗೆ ಆಗಮಿಸಿ, ನಮ್ಮನ್ನು ಪವಿತ್ರಗೊಳಿಸಿ ಹಾಗೂ ವಿದ್ವತ್ಸಭೆಗೆ ಅಧ್ಯಕ್ಷರಾಗಿ ಮಾರ್ಗದರ್ಶನ ನೀಡಬೇಕೆಂದು ಪ್ರಾರ್ಥಿಸಿದನು.

ಆಚಾರ್ಯರು ಅವನ ಆಹ್ವಾನವನ್ನು ಸ್ವೀಕರಿಸಿ ಸಭೆಗೆ ಬಂದರು. ಶ್ರೀಶೋಭನ-ಭಟ್ಟರು ಆಚಾರ್ಯರನ್ನು ಪರಿಚಯಿಸುತ್ತಾ, ಶ್ರೀಗಳವರು ತಮ್ಮ ತತ್ತ್ವವಾದವನ್ನು ಸಭೆಯಲ್ಲಿ ಮಂಡಿಸುವರು. ಅವರ ತತ್ತ್ವ ಏನು ಹೇಳುತ್ತದೆ ಕೇಳೋಣ ? ಎಂಬುದಾಗಿ ಹೇಳಲು, ಸಭೆ ಕರತಾಡನಗಳೊಂದಿಗೆ ಹರ್ಷ ವ್ಯಕ್ತಮಾಡಿತು.

ಆ ಸಭೆಯಲ್ಲಿ ಆಚಾರ್ಯರು ಹಿಂದಿನ ದಾರ್ಶನಿಕರನ್ನು ಹೆಸರಿಸದೆ, ಅವರ ತತ್ತ್ವಗಳಲ್ಲಿನ ಲೋಪದೋಷಗಳನ್ನು ಎತ್ತಿ ತೋರಿಸಿ, ತಮ್ಮ ತತ್ತ್ವಗಳನ್ನು ವೇದ-ಉಪನಿಷತ್ತು-ಸ್ಮೃತಿ ಇವುಗಳ ಆಧಾರದಿಂದ ಸಭೆಗೆ ತಿಳಿಯಪಡಿಸಿ, ಜಗತ್ತು ಮಿಥ್ಯೆಯಲ್ಲ ಸತ್ಯವು, ಆತ್ಮ-ಪರಮಾತ್ಮರು ಬೇರೆ ಬೇರೆ, ಅವರಲ್ಲಿ ಐಕ್ಯವಿಲ್ಲ ಎಂಬಿತ್ಯಾದಿ ದ್ವೈತ-ದರ್ಶನವನ್ನು ಸಭೆಗೆ ಮಾಡಿಕೊಟ್ಟರು. ಅನಂತರ ಶೋಭನಭಟ್ಟರು ತಮ್ಮ ಬಹುದಿನಗಳ ಸಂಶಯವನ್ನು ನಿರ್ಮೂಲಮಾಡಿದಂತಹ ಈ ತತ್ತ್ವವಾದದ ಮತ್ತಷ್ಟು ವಿಚಾರಗಳನ್ನು ಶ್ರೀಮದಾಚಾರ್ಯರ ಜೊತೆಗೆ ಮತ್ತಷ್ಟು ಹರಿತವಾಗಿ ವಿಚಾರಮಾಡಿ, ತಮ್ಮನ್ನು ಶಿಷ್ಯನನ್ನಾಗಿ ಸ್ವೀಕರಿಸಲು ಪ್ರಾರ್ಥಿಸಿದರು.

ಆಚಾರ್ಯರು ಅವರ ಪ್ರಾರ್ಥನೆಯನ್ನು ಸ್ವೀಕರಿಸಿ, ಅವರಿಗೆ ವೈಷ್ಣವ ದೀಕ್ಷೆಯನ್ನು ದಯಪಾಲಿಸಿದರು. ಆಚಾರ್ಯರ ಆಜ್ಞೆಯ ಮೇರೆಗೆ ಶೋಭನಭಟ್ಟರು ಕೆಲಕಾಲ ರಾಜಮಹೇಂದ್ರಿಯ ರಾಜಕಾರ್ಯವನ್ನು ಸಮರ್ಥವಾಗಿ ನಡೆಸಿ, ನಂತರ ಉಡುಪಿಗೆ ಬಂದು ಆಚಾರ್ಯರ ಬಳಿಯಲ್ಲಿ ವ್ಯಾಸಂಗವನ್ನು ಮುಂದುವರೆಸಿದರು. ಅವರಿಗೆ ಆಚಾರ್ಯರು ಒಂದು ಶುಭಸಂದರ್ಭದಲ್ಲಿ ಕಣ್ವತೀರ್ಥದಲ್ಲಿ ತುರ್ಯಾಶ್ರಮವನ್ನು ಕೊಟ್ಟು ''ಶ್ರೀಪದ್ಮನಾಭತೀರ್ಥ'' ಎಂಬ ಯತಿನಾಮವನ್ನು ದಯಪಾಲಿಸಿದರು. ಹಾಗೂ ಅವರಿಗೆ ಶ್ರೀಗೋಪೀನಾಥದೇವರ ದಿವ್ಯಪ್ರತಿಮಾವನ್ನು ಕೊಟ್ಟರು.

ಶ್ರೀಪದ್ಮನಾಭತೀರ್ಥರು ತಮ್ಮ ಅಮೋಘವಾದ ಪಾಂಡಿತ್ಯದಿಂದ ವಿಜೃಂಭಿಸಿ-ದವರಾಗಿ ಸರ್ವಮೂಲಗಳಲ್ಲಿ ದಶಪ್ರಕರಣ, ಗೀತಾಭಾಷ್ಯ ಮತ್ತು ಗೀತಾತಾತ್ಪರ್ಯ ಮುಂತಾದ ಗ್ರಂಥಗಳಿಗೆ ಟೀಕೆಗಳನ್ನು ರಚಿಸಿ ಮುಂದಿನ ವ್ಯಾಖ್ಯಾನಕಾರರಿಗೆ ಮಾರ್ಗ-

ದರ್ಶಕರಾದರು. ಬ್ರಹ್ಮಸೂತ್ರಗಳಿಗೆ ಆಚಾರ್ಯರಿಂದ ರಚಿತವಾದ ಭಾಷ್ಯ ಮತ್ತು ಅನುವ್ಯಾಖ್ಯಾನಗಳಿಗೆ ಸತ್ತರ್ಕದೀಪಾವಲೀ ಮತ್ತು ಸಂನ್ಯಾಯರತ್ನಾವಲೀ ಎಂಬ ಟೀಕೆಗಳನ್ನು ರಚಿಸಿದರು. ಇದರಿಂದಾಗಿ ಇವರಿಗೆ ''**ಪ್ರಾಚೀನ ಟೀಕಾಚಾರ್ಯ**''ರೆಂದೇ ಕರೆಯಲ್ಪಡಲಾಗುತ್ತಿದೆ.

ಆಚಾರ್ಯರ ಬದರಿಕಾಶ್ರಮದ ಪ್ರಯಾಣದ ನಂತರ, ವಿದ್ಯಾಸಿಂಹಾಸನವನ್ನು ಏರಿದ ಶ್ರೀಪದ್ಮನಾಭತೀರ್ಥರು ತಮ್ಮ ಶಿಷ್ಯರೊಬ್ಬರಿಗೆ ಸಂನ್ಯಾಸ ನೀಡಿ ''ಲಕ್ಷ್ಮೀಧರ ತೀರ್ಥ''ರೆಂದು ನಾಮಕರಣ ಮಾಡಿದರು. ಆಚಾರ್ಯರಿಂದ ದತ್ತವಾಗಿದ್ದ ಶ್ರೀಗೋಪೀನಾಥದೇವರನ್ನು ಅವರಿಗೆ ನೀಡಿ, ಪರಂಪರೆಯನ್ನು ಮುಂದುವರೆಸಲು ಆದೇಶ ನೀಡಿದರು. ಶ್ರೀಲಕ್ಷ್ಮೀಧರ ತೀರ್ಥರಿಂದ ಮುಂದುವರೆದ ಮಠವೇ ಈಗಿನ ''ಶ್ರೀಪಾದ-ರಾಜ ಮಠ''.

ಸುಮಾರು ಒಂಭತ್ತುವರ್ಷಗಳ ಕಾಲ ವೇದಾಂತಸಾಮ್ರಾಜ್ಯಾಧಿಪತಿಗಳಾಗಿ ಕಾರ್ಯ ನಿರ್ವಹಿಸಿದ ಶ್ರೀಪದ್ಮನಾಭತೀರ್ಥರು ಶ್ರೀನರಹರಿತೀರ್ಥರಿಗೆ ಪಟ್ಟಾಭಿಷೇಕಮಾಡಿ ಆಚಾರ್ಯಕರಾರ್ಚಿತವಾದ ಎಲ್ಲಾ ಪ್ರತಿಮೆಗಳನ್ನು ಹಾಗೂ ಆಚಾರ್ಯಕೃತ ಗ್ರಂಥರಾಶಿ, ತಾವು ರಚಿಸಿದ ಟೀಕಾಗ್ರಂಥಗಳನ್ನು ಹಸ್ತಾಂತರಿಸಿ ರಕ್ತಾಕ್ಷಿನಾಮ ಸಂವತ್ಸರದ ಕಾರ್ತೀಕ ಕೃಷ್ಣಚತುರ್ದಶಿಯಂದು ನವವೃಂದಾವನದಲ್ಲಿ ಬೃಂದಾವನಸ್ಥರಾದರು.

''ಶ್ರೀಪದ್ಮನಾಭತೀರ್ಥರು ರಮಾನಿವಾಸದ ಯೋಗ್ಯವಾದ ವಾಸಭೂಮಿ. ಸಂನ್ಯಾಯರತ್ನಾವಲಿ ಎಂಬ ಟೀಕಾಗ್ರಂಥದ ಜನ್ಮಭೂಮಿ. ವೈರಾಗ್ಯವೆಂಬ ಭಾಗ್ಯ ತುಂಬಿದ ಕಡಲು. ಶ್ರೀಹರಿಯ ವಾಸಭೂಮಿಯು. ಅನೇಕ ಭಾಗ್ಯದನಿಧಿಯೂ ಆದವರು. ಅಂತಹ ಶ್ರೀಪದ್ಮನಾಭತೀರ್ಥರು ನಮಗೆ ಭಾಗ್ಯಪ್ರದರಾಗಲಿ.'' ಎಂಬುದಾಗಿ ಶ್ರೀಜಯತೀರ್ಥರು ತಮ್ಮ ಮೇರುಕೃತಿಯಾದ ಶ್ರೀಮನ್ನ್ಯಾಯಸುಧಾದಲ್ಲಿ ಕೊಂಡಾಡಿದ್ದಾರೆ.

ಅಂತಹವರ ಮಹಿಮೆಗಳನ್ನು ನೆನೆಯುವ ಮಾಧ್ವರೇ ಧನ್ಯರು. ನಮ್ಮ ಪಾಪರಾಶಿಗಳನ್ನು ನಿರ್ಮೂಲಮಾಡುವ ಅಂತಹ ಮಹಾನುಭಾವರ ಅನುಗ್ರಹಕ್ಕೆ ಪಾತ್ರರಾಗಲು ಶ್ರೀಮಧ್ವ-ಸಿದ್ಧಾಂತವನ್ನು ಅರಿಯುವ ಪ್ರಯತ್ನವಾದರೂ ನಮ್ಮಿಂದ ನಡೆಯಲಿಕ್ಕೆ ಶ್ರೀಪದ್ಮನಾಭ-ತೀರ್ಥರ ಅಂತರ್ಗತ ಶ್ರೀಮದಾಚಾರ್ಯರಂತರ್ಗತ ಮಧ್ವೇಶಕೃಷ್ಣನು ಕಾರುಣ್ಯ ತೋರಿಸಲಿ ಎಂಬ ಪ್ರಾರ್ಥನೆ ನಮ್ಮದಾಗಲಿ.